ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂ: ಉನಿ/ರಾಕಘ/ಸುತ್ತೋಲೆ-06/2020-21 ದಿನಾಂಕ : 14.08.2020

**<u>ಸುತ್ತೋಲೆ</u>**

**ವಿಷಯ:** ಮನೆಯ ಆರೈಕೆಯಲ್ಲಿರುವ ಕೋವಿಡ್-19 ವ್ಯಕ್ತಿಗಳಿಂದ ಉತ್ಪನ್ನವಾಗುವ ಘನತ್ಯಾಜ್ಯಗಳ ನಿರ್ವಹಣೆ

**ಉಲ್ಲೇಖ:** ಪರಿಷ್ಕೃತ ಸುತ್ತೋಲೆ ಸಂ. ಆಕುಕ295 ಅಮಕಾ 2020, ದಿನಾಂಕ :10ನೇ ಆಗಸ್ಟ್ 2020.

*****

ಇತ್ತೀಚಿಗೆ, ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಲಿ, ಭಾರತ ಸರ್ಕಾರವು ಕೋವಿಡ್-19 ರೋಗಿಗಳ ಪತ್ತೆ/ಚಿಕಿತ್ಸೆ/ಪ್ರತ್ಯೇಕವಾಗಿರಿಸುವಿಕೆಯ ಸಮಯದಲ್ಲಿ ಉತ್ಪನ್ನವಾದ ತ್ಯಾಜ್ಯಗಳ ನಿರ್ವಹಣೆ, ಉಪಚಾರ ಹಾಗೂ ವಿಲೇವಾರಿ ಕುರಿತು ಪರಿಷ್ಕೃತ ಮಾರ್ಗಸೂಚಿಗಳನ್ನು ನೀಡಿದೆ. ಅದರಂತೆ, ಕರ್ನಾಟಕ ಸರ್ಕಾರವು ಮನೆಯ ಆರೈಕೆಯಲ್ಲಿರುವ ಕೋವಿಡ್ -19 ವ್ಯಕ್ತಿಗಳು ಉತ್ಪಾದಿಸುವ ತ್ಯಾಜ್ಯಗಳ ನಿರ್ವಹಣೆಯನ್ನು ಒಳಗೊಂಡಂತೆ ಮನೆಲ್ಲಿನ ಆರೈಕೆಗಾಗಿ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಿದೆ.

ಇಂತಹ ಪ್ರಸಂಗದಲ್ಲಿ, ರಾಜ್ಯದಲ್ಲಿರುವ ಎಲ್ಲ ನಗರ ಸಭೆಗಳು ಹಾಗೂ ಗ್ರಾಮ ಪಂಚಾಯಿತಿಗಳು ಈ ಮಾರ್ಗಸೂಚಿಗಳನ್ನು ಅನುಸರಿಸಲು ಆದೇಶಿಸಲಾಗಿದೆ.

ಮನೆಯ ಆರೈಕೆಯಲ್ಲಿರುವ ಕೋವಿಡ್-19 ವ್ಯಕ್ತಿಗಳು ಮತ್ತು ಅವರ ಕುಟುಂಬ ಸದಸ್ಯರು ಘನ ತ್ಯಾಜ್ಯ ನಿರ್ವಹಣೆಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು:

1. ಕೋವಿಡ್-19 ವ್ಯಕ್ತಿಗಳು ಬಳಸಿದ ಮುಖದ ಮಾಸ್ಕ್‌ಗಳು, ಟಿಶ್ಯೂಗಳು, ಶೌಚಾಲಯದ ವಸ್ತುಗಳು ಅಥವಾ ರಕ್ತ/ ಶರೀರದ ಸ್ರಾವಗಳಿಂದ ಮಲಿನವಾದ ಸ್ವಾಬ್ ಗಳು, ಬಳಸಿಚ ಸಿರಿಜುಗಳು, ಔಷಧಗಳು ಇತ್ಯಾದಿಗಳು ಸೇರಿದಂತೆ ಇವುಗಳನ್ನು ಜೀವ-ವೈದ್ಯಕೀಯ ತ್ಯಾಜ್ಯವೆಂದು ಪರಿಗಣಿಸತಕ್ಕದ್ದು ಮತ್ತು 1% ಹೈಪೋಕ್ಲೋರೇಟ್ ದ್ರಾವಣದಲ್ಲಿ ನೆನೆಸಿ/ಸಿಂಪಡಿಸುವುದು ಹಾಗೂ ಮುಚ್ಚಳವಿರುವ ಪತ್ಯೇಕವಾದ ಹಳದಿ ಬಣ್ಣದ ಚೀಲದಲ್ಲಿ ವಿಲೇವಾರಿ ಮಾಡುವುದು.

2. ಸ್ಥಳೀಯ ನಾಗರೀಕ/ ಬಿಬಿಎಂಪಿ ಅಧಿಕಾರಿಗಳು ಮನೆಯ ಆರೈಕೆಯಲ್ಲಿರುವ ಕೋವಿಡ್-19 ವ್ಯಕ್ತಿಗಳಿಗೆ ಹಳದಿ ಬಣ್ಣದ ಚೀಲಗಳನ್ನು ಒದಗಿಸುವುದು ಹಾಗೂ ಇದನ್ನು ಸ್ಥಳೀಯ ನಾಗರೀಕ/ ಬಿಬಿಎಂಪಿ ಅಧಿಕಾರಿಗಳು ವಾರಕ್ಕೆರಡು ಬಾರಿ ಸಂಗ್ರಹಿಸುವುದು

3. ಆರೈಕೆ ಮಾಡುವವರು ಮತ್ತು ಇತರ ಕುಟುಂಬ ಸದಸ್ಯರು ಬಳಸುವ ಮುಖವಾಡಗಳು ಮತ್ತು ಕೈಗವಸುಗಳನ್ನು ಅವುಗಳ ಮರುಬಳಕೆ ತಡೆಗಟ್ಟಲು ಕತ್ತರಿಸಿದ ನಂತರ ಸಾಮಾನ್ಯ ತ್ಯಾಜ್ಯದಂತೆ ವಿಲೇವಾರಿ ಮಾಡುವ ಮೊದಲು ಕನಿಷ್ಠ 72 ಗಂಟೆಗಳ ಕಾಲ ಕಾಗದದ ಚೀಲದಲ್ಲಿ ಇಡಬೇಕು.

4. ಮನೆಯ ಆರೈಕೆಯಲ್ಲಿರುವ ಕೋವಿಡ್-19 ವ್ಯಕ್ತಿಗಳು ಮತ್ತು ಅವರ ಕುಟುಂಬ ಸದಸ್ಯರು ಬಳಸಿದ ಅಥವಾ ಅವರಿಂದ ಉತ್ಪನ್ನವಾದ ಉಳಿದ ಆಹಾರ, ಖಾಲಿ ಹಣ್ಣಿನ ರಸದ ಖಾಲಿ ಬಾಟಲಿಗಳು, ಬಳಸಿ ಬಿಸಾಡ

ಬಹುದಾದ ಊಟದ ತಟ್ಟೆ-ಲೋಟಗಳು, ಟೆಟ್ರಾ ಪ್ಯಾಕುಗಳು, ಕುಡಿಯುವ ನೀರಿನ ಖಾಲಿ ಬಾಟಲಿಗಳು, ಪ್ಯಾಕೇಜಿಂಗ್ ವಸ್ತುಗಳು, ಅಡುಗೆ ಮನೆಯಲ್ಲಿ ಉತ್ಪನ್ನವಾದ ತ್ಯಾಜ್ಯ, ನಿರುಪಯುಕ್ತ ಕಾಗದಗಳು, ನಿರುಪಯುಕ್ತ ಪ್ಲಾಸಿಕ್ ಗಳು, ನೆಲ ಶುಚಿಗೊಸಿದಾಗ ಬಂದ ಧೂಳು ಇವುಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸುವುದು ಹಾಗೂ ಸುರಕ್ಷಿತವಾಗಿ ಕಟ್ಟಿ ಸ್ಥಳೀಯ ನಾಗರೀಕ/ ಬಿಬಿಎಂಪಿ ಅಧಿಕಾರಿಗಳು ನೇಮಿಸಿರುವ ತ್ಯಾಜ್ಯ ಸಂಗ್ರಾಹಕರಿಗೆ ನೀಡುವುದು.ಈ ತ್ಯಾಜ್ಯವನ್ನು ಕೋವಿಡ್ ಸಕಾರಾತ್ಮಕ ವ್ಯಕ್ತಿಯ ಸೋಂಕಿತ ತ್ಯಾಜ್ಯದೊಂದಿಗೆ ಬೆರೆಸಬಾರದು ಅದನ್ನು ಹಳದಿ ಚೀಲದಲ್ಲಿ ಪ್ರತ್ಯೇಕವಾಗಿ ಸಾಗಿಸುವುದು.

**ಹಳದಿ ಚೀಲಗಳ ವಿಲೇವಾರಿ:** ಎಲ್ಲ ನಗರ ಸಭೆಗಳು ಹಾಗೂ ಗ್ರಾಮ ಪಂಚಾಯಿತಿಗಳು ಸಾಮಾನ್ಯ ಜೀವ ವೈದ್ಯಕೀಯ ಉಪಚಾರ ಸೌಲಭ್ಯಗಳಿಂದ ನೀಡಲಾಗಿರುವ ಈ ಕೆಳಗಿವನವುಗಳಲ್ಲಿ ಯಾವುದಾದರೂ ಒಂದು ಪದ್ಧತಿಯಿಂದ ಹಳದಿ ಚೀಲಗಳ ಸುರಕ್ಷಿತ ವಿಲೇವಾರಿಯನ್ನು ಖಾತರಿ ಪಡಿಸಿಕೊಳ್ಳುವುದು.

- ಮನೆಯವರು ಜೀವ ವೈದ್ಯಕೀಯ ತ್ಯಾಜ್ಯ ಹಿರುವ ಹಳದಿ ಚೀಲಗಳನ್ನು ಬಾಗಿಲ ಬಳಿಯಲ್ಲಿ ನಾಗರೀಕ/ ಬಿಬಿಎಂಪಿ ಅಧಿಕಾರಿಗಳು ನೇಮಿಸಿರುವ ಅಧಿಕೃತ ತ್ಯಾಜ್ಯ ಸಂಗ್ರಾಹಕರಿಗೆ ನೀಡುವುದು. ಮುಂದೆ, ನಾಗರೀಕ/ ಬಿಬಿಎಂಪಿ ಅಧಿಕಾರಿಗಳು ಸಾಮಾನ್ಯ ಜೀವ ವೈದ್ಯಕೀಯ ಉಪಚಾರ ಸೌಲಭ್ಯಗಳ ಮೂಲಕ ಸುರಕ್ಷಿತ ವಿಲೇವಾರಿಯನ್ನು ಖಾತರಿ ಪಡಿಸಿಕೊಳ್ಳುವುದು. (CBWTF)

ಅಥವಾ

- ಮನೆಯವರು ನಾಗರೀಕ/ ಬಿಬಿಎಂಪಿ ಅಧಿಕಾರಿಗಳಿಂದ ನಿಗದಿ ಪಡಿಸಿರುವ ಸಂಗ್ರಹ ಕೇಂದ್ರಗಳಲ್ಲಿ ಜೀವ ವೈದ್ಯಕೀಯ ತ್ಯಾಜ್ಯವನ್ನು ನಾಗರೀಕ/ ಬಿಬಿಎಂಪಿ ಅಧಿಕಾರಿಗಳು ಇಡುವುದು; ಮುಂದೆ, ನಾಗರೀಕ/ ಬಿಬಿಎಂಪಿ ಅಧಿಕಾರಿಗಳು ಸಾಮಾನ್ಯ ಜೀವ ವೈದ್ಯಕೀಯ ಉಪಚಾರ ಸೌಲಭ್ಯಗಳ ಮೂಲಕ ಸುರಕ್ಷಿತ ವಿಲೇವಾರಿಯನ್ನು ಖಾತರಿ ಪಡಿಸಿಕೊಳ್ಳುವುದು. (CBWTF)

ಅಥವಾ

- ಸಾಮಾನ್ಯ ಜೀವ ವೈದ್ಯಕೀಯ ಉಪಚಾರ ಸೌಲಭ್ಯಗಳಿಂದ (CBWTF) ನೇಮಕವಾದ ಸಂಗ್ರಾಹಕರಿಗೆ ಮನೆಯ ಬಾಗಿಲಲ್ಲಿ ಈ ಜೀವ ವೈದ್ಯಕೀಯ ತ್ಯಾಜ್ಯವನ್ನುಹಸ್ತಾಂತರಿಸುವುದು.

ಮನೆಗಳಿಂದ ಹಳದಿ ಚೀಲಗಳನ್ನು ಸಂಗ್ರಹಿಸುವ ವ್ಯಕ್ತಿಗಳು ವೈದ್ಯಕೀಯ ಮುಖವಾಡ, ಕೈಗವಸು, ಏಪ್ರನ್ ಮತ್ತು ಗುಂಬೂಟ್‌ಗಳನ್ನು ಧರಿಸಬೇಕು.

14.9.

ಆಯುಕ್ತರು

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

1. ಆಯುಕ್ತರು- ಬಿಬಿಎಂಪಿ
2. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
3. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4. ಆಯುಕ್ತರುಗಳು, ಎಲ್ಲಾ ನಗರ ಪಾಲಿಕೆಗಳು

ಪ್ರತಿಯನ್ನುಕೃಪಾವಗಾಹನೆಗಾಗಿ:

1. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು
2. ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು
3. ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು
4. ಅಭಿಯಾನ ನಿರ್ದೇಶಕರು, ರಾಷ್ಟ್ರೀ ಆರೋಗ್ಯ ಅಭಿಯಾನ,
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
6. ಎಲ್ಲಾ ಜಿಲ್ಲೆಗಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮತ್ತು ಮುಖ್ಯ ಆರೋಗ್ಯಾಧಿಕಾರಿ, ಬಿಬಿಎಂಪಿ
7. ಎಲ್ಲಾ ಜಿಲ್ಲೆಗಳ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು.